ಯೋಚನೆಗಳ ಕಣಿವೆಯಲ್ಲಿ ಏರಿಳಿದು ತಮಗೆ ತಾವೇ ಪ್ರಸನ್ನಚಿತ್ತರಾದರು. ಬದಿಯಿಂದ ಹಾದು ಒಳಗೆ ಹೊರಟ ಮಗಳನ್ನು ಮೃದುವಾಗಿ ಕರೆದರು. ಎದುರಿನ ಕುರ್ಚಿಯಲ್ಲಿ ಕೂರಿಸಿಕೊಂಡರು.

"ಉಷಾ, ಅವನನ್ನು ಪ್ರೀತಿಸ್ತೀಯಾ ?"

"ಹ್ಞಂ!"

"ಎಷ್ಟು ಪ್ರೀತಿಸುತ್ತಿ?"

"ತುಂಬಾ..."

"ತುಂಬಾ ಅಂದರೆ?"

"ತುಂಬಾ ಅಂದರೆ ಸಮುದ್ರ ಉಂಟಲ್ಲ ಅಷ್ಟು ಆಳ. ಆಕಾಶ ಉಂಟಲ್ಲ ಅಷ್ಟು ಅಗಲ... ತುಂಬಾ ಅಂದರೆ ತುಂಬಾ..."

...ಗೋಪಾಲ ನಾಯಕರು ನಿಟ್ಟುಸಿರು ಬಿಟ್ಟರು. ಕುರ್ಚಿಯಿಂದ ಮೇಲೆದ್ದರು.

"ನಿನಗೆ ಪ್ರಪಂಚ ತಿಳಿಯುವುದಿಲ್ಲ ಮಗೂ. ಈ ಬಯಲುಸೀಮೆಯ ಜನಕ್ಕೆ ದೇಹವೂ ಮನಸ್ಸುಗಳೂ ಕುರೂಪವಾಗಿರುತ್ತವೆ. ಮಲೆನಾಡಿನ ಬಗ್ಗೆ ಅವರಿಗೆ ಯಾವತ್ತೂ ಮೋಹ. ಮೋಹಗಳು ಬಹುಕಾಲ ನಿಲ್ಲುವುದಿಲ್ಲ. ಆ ಶ್ರೀರಾಮು ರತ್ನಳನ್ನು ಮದುವೆಯಾಗುವವನ ಹಾಗೇ ನಡೆದುಕೊಂಡ. ಕೊನೆಗೆ ತನ್ನ ಸೀಮೆಯಿಂದ ಇನ್ನೊಬ್ಬಳನ್ನು ಕಟ್ಟಿಕೊಂಡು ಬಂದ. ಈಗ ನೀನು ಅವನ ಭಾವಮೈದುನನಿಗೆ ಬಲಿಯಾಗುವುದಾ? ನೀನು ತುಂಬಾ ಚಿಕ್ಕವಳು... ಚೆನ್ನಾಗಿ ಓದು... ಬಯಲುಸೀಮೆಯ ಜನ ಇಲ್ಲಿಗೆ ಬರುವುದು ಮಲೆನಾಡನ್ನು ಹಾಳು ಮಾಡಿ ಹೋಗಲೆಂದೇ..."

**ನನ್ನಂಥ ಭೀಕರ ಸ್ವರೂಪನಲ್ಲಿ ತಾಯ್ತನ ಹುಡುಕುತ್ತಿಯಲ್ಲ? ಹೋಗು ಹೊರಟು ಹೋಗು. ಒಮ್ಮೆ ನಾನು ಮೈಕೊಡವಿ ಆಕಳಿಸಿದರೆ ಪರ್ವತದಂಥ ದೊಡ್ಡ ಅಲೆ ಬಂದು ನಿನ್ನನ್ನು ನನ್ನ ಗರ್ಭಕ್ಕೆ ಹೊತ್ತು ತರುತ್ತದೆ. ನನ್ನ ಗರ್ಭದಲ್ಲಿ ನೂರಾರು ತಿಮಿಂಗಿಲಗಳಿವೆ. ಹುಡುಗ, ಓಡಿಹೋಗು.**

"ನೋ ಪಪ್ಪ... ದೇವು ಅಂಥವನಲ್ಲ. ಅವನನ್ನು ಬಿಟ್ಟು ನಾನು ಬದುಕಲಾರೆ. ನನಗೆ ನೀನೇ ಅಪ್ಪ–ಅಮ್ಮ ಎಲ್ಲಾ... ಅವನನ್ನು ಬಿಟ್ಟು ಬಾ ಅಂತ ಕರೆಯಬೇಡ. ಪ್ಲೀಸ್ ಪಪ್ಪ..." ಉಷಾ ಬಿಕ್ಕಿದಳು. ಎಷ್ಟೋ ಹೊತ್ತು ನಾಯಕರು ಸುಮ್ಮನಿದ್ದರು. ಬದುಕಿನಲ್ಲಿ ಹಲವು ಪೆಟ್ಟುಗಳಿಂದ ರೂಪುಗೊಂಡ ಅವರು ತಾಳ್ಮೆ ಕಳೆದುಕೊಳ್ಳಲಿಲ್ಲ. ಕಾಣದ–ಕೇಳದ– ಊರಿನಿಂದ ಬಂದ, ಕೈಯಲ್ಲಿ ನೌಕರಿ ಇಲ್ಲದ ಹುಡುಗನೊಬ್ಬನಿಗೆ ಮಗಳನ್ನು ಕೊಡುವುದೇ? ಕೊನೆಗೆ "ದೇವರಿಚ್ಛೆ, ಊಟಕ್ಕೆ ಏಳು" ಎಂದರು.

ದೇವರಾಜ ಮಳೆಯಲ್ಲಿ ನೆನೆಯುತ್ತಾ ಮನೆಗೆ ಬಂದ. ಇನ್ನೇನು ಬಾಗಿಲು ಕುಟ್ಟಬೇಕೆನ್ನುವಷ್ಟರಲ್ಲಿ ಒಳಗೆ ಎಂದೂ ಕೇಳಿಸದಿದ್ದ ಅಕ್ಕ ಭಾವನ ಜಗಳ ಕಂಡು ಸುಮ್ಮನೆ ಕೇಳುತ್ತಾ ನಿಂತ.